# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 498

ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ

ಉತ್ತರಿಸುವ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10.03.2020

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಚಿಕ್ಕಮಗಳೂರು ಜಿಲ್ಲೆಯ ಯಾವ ಯಾವ ಪ್ರದೇಶಗಳಲ್ಲಿ ಯಾವ ಯಾವ ತೋಟಗಾರಿಕಾ ಉತ್ಪನ್ನಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ; | ಚಿಕ್ಕಮಗಳೂರು ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿರುವ ತೋಟಗಾರಿಕಾ ಉತ್ಪನ್ನಗಳ ವಿವರ ಈ ಕೆಳಕಂಡಂತಿದೆ.<br>1. ಚಿಕ್ಕಮಗಳೂರು: ತೆಂಗು, ಅಡಿಕೆ, ಬಾಳೆ, ಆಲೂಗಡ್ಡೆ, ಇತರೆ ತರಕಾರಿಗಳು, ಸೇವಂತಿಗೆ, ಕನಕಾಂಬರ, ಚೆಂಡು ಹೂ, ಆಸ್ಟರ್, ಇತರೆ ಅಲಂಕಾರಿಕ ಹೂವುಗಳು ಹಾಗೂ ಸಾಂಬಾರು ಬೆಳೆಗಳು.<br>2.ಕಡೂರು: ತೆಂಗು, ಅಡಿಕೆ ಬಾಳೆ, ಅರಿಶಿನ, ಶುಂಠಿ, ತರಕಾರಿ ಬೆಳೆಗಳು, ಸೇವಂತಿಗೆ, ಚೆಂಡು ಹೂ ಮತ್ತು ಆಸ್ಟರ್.<br>3.ತರಿಕೆರೆ: ತೆಂಗು, ಅಡಿಕೆ, ಬಾಳೆ, ಅರಿಶಿನ, ಶುಂಠಿ, ವೀಳ್ಯದೆಲೆ, ತರಕಾರಿ ಬೆಳೆಗಳು, ಸೇವಂತಿಗೆ, ಚೆಂಡು ಹೂಮತ್ತುಆಸ್ಟರ್<br>4.ಮೂಡಿಗೆರೆ: ಏಲಕ್ಕಿ, ಕಾಳು ಮೆಣಸು, ಅಡಿಕೆ, ಕೋಕೊ, ಬಾಳೆ, ಕಿತ್ತಳೆ, ವೀಳ್ಯದೆಲೆ, ಅಲ್ಪಾವಧಿಯ ಹಾಗೂ ಸಾಂಬಾರು ಬೆಳೆಗಳು.<br>5.ಕೊಪ್ಪ: ಅಡಿಕೆ, ಕಾಳು ಮೆಣಸು, ಕೋಕೊ, ವೀಳ್ಯದೆಲೆ ಹಾಗೂ ಸಾಂಬಾರು ಬೆಳೆಗಳು.<br>6.ನರಸಿಂಹರಾಜಪುರ: ಏಲಕ್ಕಿ, ಕಾಳು ಮೆಣಸು, ಅಡಿಕೆ, ಕೋಕೊ, ಬಾಳೆ, ಕಿತ್ತಳೆ, ವೀಳ್ಯದೆಲೆ, ಸುವರ್ಣಗಡ್ಡೆ, ಅನಾನಸ್, ಸರ್ವಸಾಂಬಾರು ಮತ್ತು ಇತರೆ ಸಾಂಬಾರು ಬೆಳೆಗಳು.<br>7.ಶೃಂಗೇರಿ: ಅಡಿಕೆ ಕೋಕೊ ಬಾಳೆ ಕಿತ್ತಳೆ ವೀಳ್ಯದೆಲೆ, ಕಾಳುಮೆಣಸು ಹಾಗೂ ಇತರೆ ಸಾಂಬಾರು ಬೆಳೆಗಳು. |

| | | |
|---|---|---|
| ಅ) | ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿರುವ ರೈತರಿಗೆ ಯಾವ ರೀತಿ ಉತ್ತೇಜನ ನೀಡಲಾಗುತ್ತಿದೆ; ಸರ್ಕಾರದಿಂದ ಒದಗಿಸಿರುವ ಸವಲತ್ತುಗಳು ಯಾವುವು; | ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿರುವ ರೈತರಿಗೆ ಉತ್ತೇಜನ ನೀಡಲು ಜಾರಿಯಲ್ಲಿರುವ ಒದಗಿಸುತ್ತಿರುವ ಸವಲತ್ತುಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಆ) | ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಎಷ್ಟು ಹಣವನ್ನು ಯಾವ ಉದ್ದೇಶಕ್ಕಾಗಿ ವೆಚ್ಚ ಮಾಡಲಾಗಿದೆ; (ವಿವರ ಒದಗಿಸುವುದು) | ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಅಂದರೆ 2016-17 ರಿಂದ 2018-19 ರವರೆಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ರೂ.8437.38 ಲಕ್ಷಗಳ ಹಣವನ್ನು ರೈತರಿಗೆ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು, ಹನಿ ನೀರಾವರಿ ಅಳವಡಿಸಲು, ಪರಿಕರಗಳನ್ನು ಖರೀದಿಸಲು, ಕೀಟ ರೋಗಗಳನ್ನು ನಿಯಂತ್ರಿಸಲು, ಜೇನು ಸಾಕಲು, ಮತ್ತಿತರೆ ಕಾರ್ಯಕ್ರಮಗಳಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನ ಮಾಡುವ ಉದ್ದೇಶಕ್ಕಾಗಿ ವೆಚ್ಚ ಮಾಡಲಾಗಿದೆ. ಯೋಜನಾವಾರು ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ |
| ಇ) | ತೋಟಗಾರಿಕೆ ಬೆಳೆಗಳನ್ನು ರಫ್ತು ಮಾಡುವ ರೈತರುಗಳಿಗೆ ಯಾವ ಸವಲತ್ತುಗಳನ್ನು ನೀಡಲಾಗುತ್ತಿದೆ? | ತೋಟಗಾರಿಕೆ ಬೆಳೆಗಳನ್ನು ರಫ್ತು ಮಾಡುವ ರೈತರುಗಳಿಗೆ ಈ ಕೆಳಕಂಡ ಸವಲತ್ತುಗಳನ್ನು ನೀಡಲಾಗುತ್ತಿದೆ<br>1. APEDA ಮೂಲಕ ಉತ್ಪನ್ನಗಳನ್ನು ರಫ್ತು ಮಾಡಲು ಅಗತ್ಯವಿರುವ ನೋಂದಣಿಯನ್ನು ಮಾಡಿಸಿಕೊಳ್ಳಲು ರೈತರಿಗೆ ತಿಳುವಳಿಕೆ ನೀಡಲಾಗುತ್ತಿದೆ.<br>2. APEDA & KAPPEC ಸಂಸ್ಥೆಯ ಸಹಯೋಗದೊಂದಿಗೆ ರಫ್ತು ಗುಣಮಟ್ಟದ ಉತ್ಪನ್ನಗಳನ್ನು ಬೆಳೆಯಲು ಅಗತ್ಯವಿರುವ ತಾಂತ್ರಿಕತೆಯ ಬಗ್ಗೆ ತರಬೇತಿಗಳನ್ನು ಹಮ್ಮಿಕೊಂಡು ತಿಳುವಳಿಕೆ ನೀಡಲಾಗುತ್ತಿದೆ.<br>3. ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ರಫ್ತು ಗುಣಮಟ್ಟದ ಉತ್ಪನ್ನಗಳನ್ನು ಬೆಳೆಯಲು ಅಗತ್ಯವಿರುವ ಸಲಕರಣೆಗಳನ್ನು ನೀಡಲಾಗುತ್ತಿದೆ ಮತ್ತು GAP (Good Agriculture Practice) ಬಗ್ಗೆ ಮಾಹಿತಿಯನ್ನು |

| | | | |
|---|---|---|---|
| | | | ನೀಡಲಾಗುತ್ತಿದೆ.<br>4. ರಫ್ತು ಮೂಲ ಸೌಲಭ್ಯಗಳಾದ ಪ್ಯಾಕ್‌ಹೌಸ್, ಶೀತಲ ಗೃಹಗಳ ನಿರ್ಮಾಣ ಹಾಗೂ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ನೆರವು ನೀಡಲಾಗುತ್ತಿದೆ.<br>5. KAPPEC ವತಿಯಿಂದ ಕೊಯ್ಲಿನ ನಂತರದ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.<br>6. ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ ಮಾಡಿ ಪ್ರೋತ್ಸಾಹ ನೀಡುವುದರ ಮೂಲಕ ಗುಣಮಟ್ಟದ ಉತ್ಪನ್ನಗಳನ್ನು ಬೆಳೆಯಲು ಪ್ರೋತ್ಸಾಹಿಸಲಾಗುತ್ತಿದೆ. |

HORTI 91 HGM 2020

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

LAD 498
***

# ಅನುಬಂಧ-1

## 2019-20 ನೇ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿರುವ ರೈತರಿಗೆ ಉತ್ತೇಜನ ನೀಡಲು ಇಲಾಖೆಯಿಂದ ಒದಗಿಸುತ್ತಿರುವ ಸವಲತ್ತುಗಳ ವಿವರ

| ಕ್ರ. ಸಂ | ಯೋಜನೆಗಳು | ಕಾರ್ಯಕ್ರಮದ ವಿವರ | ಸಿಗುತ್ತಿರುವ ಸವಲತ್ತುಗಳು | ಶೇಕಡಾವಾರು ಸಹಾಯಧನ | |
|---|---|---|---|---|---|
| | | | | ಸಾಮಾನ್ಯ | ಪ.ಜಾ./ಪ.ಪಂ |
| I. | ಕೇಂದ್ರ ವಲಯ ಯೋಜನೆಗಳು | | | | |
| 1 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನಾ – ಸೂಕ್ಷ್ಮ ನೀರಾವರಿ ಯೋಜನೆ | - | ಹನಿ ನೀರಾವರಿ ಅಳವಡಿಕೆಗೆ ಗರಿಷ್ಠ 5 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುತ್ತಿದೆ. ಮೊದಲ 2 ಹೆಕ್ಟೇರ್ ಪ್ರದೇಶಕ್ಕೆ ಶೇ. 90 ರಷ್ಟು ಸಹಾಯಧನ ಮತ್ತು ನಂತರದ 3 ಹೆಕ್ಟೇರ್ ಪ್ರದೇಶಕ್ಕೆ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಶೇಕಡಾವಾರು ಮಿತಿಯೊಳಗೆ ಸಹಾಯಧನ ನೀಡಲಾಗುತ್ತಿದೆ. | 90 | 90 |
| 2 | ರಾಷ್ಟ್ರೀಯ ತೋಟಗಾರಿಕೆ ಮಿಷನ್ | | | | |
| i. | ನರ್ಸರಿ ಸ್ಥಾಪನೆ | | | | |
| | a) | ಮಾದರಿ ಸಸ್ಯಾಗಾರ (4ಹೆ) ಸಾರ್ವಜನಿಕ ವಲಯ | ಶೇ.100 ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್ ಗೆ ರೂ.25.00 ಲಕ್ಷಗಳಂತೆ, ಗರಿಷ್ಟ 4ಹೆ ವರೆಗೆ ರೂ.100.00 ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ. | - | - |
| | b) | ಖಾಸಗಿ ವಲಯ | ಶೇ.40 ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್ ಗೆ ರೂ.10.00 ಲಕ್ಷಗಳಂತೆ, ಗರಿಷ್ಟ 4ಹೆ ವರೆಗೆ ರೂ.40.00 ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ. | 40 | 40 |

| | | | | | |
|---|---|---|---|---|---|
| | c) | ಸಣ್ಣ ಸಸ್ಯಾಗಾರ (4ಹೆ) ಸಾರ್ವಜನಿಕ ವಲಯ | ಶೇ.100 ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್ ಗೆ ರೂ.15.00 ಲಕ್ಷಗಳು. | - | - |
| | d) | ಖಾಸಗಿ ವಲಯ | ಶೇ.50ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್ ಗೆ ರೂ.7.50 ಲಕ್ಷಗಳು. | 50 | 50 |
| ii. | **ನರ್ಸರಿಗಳ ಉನ್ನತೀಕರಣ** | | | | |
| | a) | ಸಾರ್ವಜನಿಕ ವಲಯ | ಶೇ.100 ರಷ್ಟು ಸಹಾಯಧನ, ಗರಿಷ್ಟ 4ಹೆ ವರೆಗೆ ರೂ.10.00 ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ. | - | - |
| | b) | ನರ್ಸರಿಗಳ ಉನ್ನತೀಕರಣ-ಖಾಸಗಿ ವಲಯ | ಶೇ.50 ರಷ್ಟು ಸಹಾಯಧನ, ಗರಿಷ್ಟ 4ಹೆ ವರೆಗೆ ರೂ.5.00 ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ. | 50 | 50 |
| iii. | **ಅಂಗಾಂಶ ಕೃಷಿ ಘಟಕಗಳ ಬಲವರ್ಧನೆ** | | | | |
| | a) | ಸಾರ್ವಜನಿಕ ವಲಯ | ಶೇ.100 ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.20.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | - | - |
| | b) | ಖಾಸಗಿ ವಲಯ | ಶೇ.50 ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.10.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 50 | 50 |
| iv. | **ಹೊಸ ಅಂಗಾಂಶ ಕೃಷಿ ಘಟಕಗಳ ಸ್ಥಾಪನೆ** | | | | |
| | a) | ಸಾರ್ವಜನಿಕ ವಲಯ | ಶೇ.100 ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.250.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | - | - |
| | b) | ಖಾಸಗಿ ವಲಯ | ಶೇ.40 ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.100.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 40 | 40 |

| | | | | | |
|---|---|---|---|---|---|
| v. | **ತರಕಾರಿ ಬೀಜೋತ್ಪಾದನೆ** | | | | |
| | a) | ಮುಕ್ತ ಪರಾಗಸ್ಪರ್ಶ ಬೆಳೆಗಳು ಸಾರ್ವಜನಿಕ ವಲಯ | ಸಾರ್ವಜನಿಕ ವಲಯಕ್ಕೆ ಶೇ.100 ರಷ್ಟು ಪ್ರತಿ ಹೆಕ್ಟೇರ್ ಗೆ ರೂ. 35,000/- ಗರಿಷ್ಟ 5 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 100 | - |
| | | ಮುಕ್ತ ಪರಾಗಸ್ಪರ್ಶ ಬೆಳೆಗಳು (ಖಾಸಗಿ ವಲಯ) | ಖಾಸಗಿ ವಲಯಕ್ಕೆ ಶೇ.35 ರಷ್ಟು ಪ್ರತಿ ಹೆಕ್ಟೇರ್ ಗೆ ರೂ.12,250 ರಂತೆ ಗರಿಷ್ಟ 5 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 35 | 90 |
| | b) | ಹೈಬ್ರಿಡ್ ಬೀಜಗಳು (ಸಾರ್ವಜನಿಕ ವಲಯ) | ಸಾರ್ವಜನಿಕ ವಲಯಕ್ಕೆ ಶೇ.100 ರಷ್ಟು ಪ್ರತಿ ಹೆಕ್ಟೇರ್ ಗೆ ರೂ. 1.50 ಲಕ್ಷಗಳಂತೆ ಗರಿಷ್ಟ 5 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 100 | - |
| | | ಹೈಬ್ರಿಡ್ ಬೀಜಗಳು (ಖಾಸಗಿ ವಲಯ) | ಪ್ರತಿ ಹೆಕ್ಟೇರ್ ಗೆ ರೂ.0.525 ಲಕ್ಷಗಳಂತೆ ಗರಿಷ್ಟ 5 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 35 | 90 |

| | | | | | |
|---|---|---|---|---|---|
| vi. | **ಪ್ರದೇಶ ವಿಸ್ತರಣೆ** | | ತೋಟಗಾರಿಕೆ ಬೆಳೆಗಳಾದ ಹಣ್ಣು, ತೋಟದ ಬೆಳೆಗಳ ಪ್ರದೇಶ ವಿಸ್ತರಣೆಗೆ ಪ್ರತಿ ಫಲಾನುಭವಿಗೆ 4 ಹೆಕ್ಟೇರ್ ಹಾಗೂ ಹೈಬ್ರೀಡ್ ತರಕಾರಿಗಳು ಹಾಗೂ ಹೂವಿನ ಬೆಳೆಗಳಿಗೆ 2 ಹೆಕ್ಟೇರ್ ವರೆಗೆ ಮಿತಿಗೊಳಿಸಿ ಸಾಮಾನ್ಯ ವರ್ಗದ ರೈತರಿಗೆ ಶೇ. 40 ರಂತೆ ಹಾಗೂ ಪರಿಶಿಷ್ಟ ಜಾತಿ/ಪಂಗಡದ ರೈತರಿಗೆ 90 ರಷ್ಟು ಸಹಾಯಧನ ನೀಡಲಾಗುತ್ತಿದೆ.<br>(ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 40 | 90 |
| vii. | **ತೋಟಗಾರಿಕಾ ಬೆಳೆಗಳ ಪುನಶ್ಚೇತನ** | | ತೋಟಗಾರಿಕಾ ಬೆಳೆಗಳ ಪುನಶ್ಚೇತನ ಕಾರ್ಯಕ್ರಮಕ್ಕೆ ಸಹಾಯಧನವನ್ನು ಗರಿಷ್ಠ ರೂ.0.20 ಲಕ್ಷಗಳು/ ಹೆಕ್ಟೇರ್ ನಂತೆ ಪ್ರತಿ ರೈತರಿಗೆ ಗರಿಷ್ಠ 2 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುತ್ತಿದೆ.<br>(ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |
| viii. | **ನೀರು ಸಂಗ್ರಹಣಾ ಘಟಕ** | | | | |
| | a) | ವೈಯಕ್ತಿಕ ಕೃಷಿ ಹೊಂಡ (20ಮೀ*20ಮೀ*3ಮೀ) | ವೈಯಕ್ತಿಕ ಕೃಷಿ ಹೊಂಡ ನಿರ್ಮಾಣಕ್ಕೆ ಸಹಾಯಧನವನ್ನು ಗರಿಷ್ಠ ರೂ.0.75 ಲಕ್ಷಗಳು/ಪ್ರತಿ ಘಟಕದಂತೆ ನೀಡಲಾಗುತ್ತಿದೆ.<br>(ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |

| | | | | | |
|---|---|---|---|---|---|
| | b) | ಸಮುದಾಯ ಕೆರೆ (45ಮೀ*45ಮೀ*3ಮೀ) | ಸಮುದಾಯ ಕೆರೆ ನಿರ್ಮಾಣಕ್ಕೆ ಶೇ.100 ರ ದರದಲ್ಲಿ ಸಹಾಯಧನವನ್ನು ಗರಿಷ್ಠ ರೂ.4.00 ಲಕ್ಷಗಳು/ಪ್ರತಿ ಘಟಕದಂತೆ ನೀಡಲಾಗುತ್ತಿದೆ. | 100 | 100 |
| | c) | ಸಮುದಾಯ ಕೆರೆ (52ಮೀ*52ಮೀ*3ಮೀ | ಸಮುದಾಯ ಕೆರೆ ನಿರ್ಮಾಣಕ್ಕೆ ಶೇ.100 ರ ದರದಲ್ಲಿ ಸಹಾಯಧನವನ್ನು ಗರಿಷ್ಠ ರೂ.5.53 ಲಕ್ಷಗಳು/ಪ್ರತಿ ಘಟಕದಂತೆ ನೀಡಲಾಗುತ್ತಿದೆ. | 100 | 100 |
| ix. | **ಸಂರಕ್ಷಿತ ಬೇಸಾಯ** | | | | |
| | a) | ಪಾಲಿ ಹೌಸ್ ನಿರ್ಮಾಣ | ಪ್ರತಿ ಫಲಾನುಭವಿಗೆ ರೂ.772.00 ರಿಂದ ರೂ.1069/ಚದರ ಮೀಟರ್ ನಂತೆ ಗರಿಷ್ಠ 4000 ಚದರ ಮೀಟರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |
| | b) | ನೆರಳು ಪರದೆ ನಿರ್ಮಾಣ | ಪ್ರತಿ ಫಲಾನುಭವಿಗೆ ರೂ.384 ಚದರ ಮೀಟರ್ ರಂತೆ ಗರಿಷ್ಠ 4000 ಚದರ ಮೀಟರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |

| | | | | | |
|---|---|---|---|---|---|
| | c) | ಪಕ್ಷಿ ನಿರೋಧಕ ಬಲೆ | ಪ್ರತಿ ಫಲಾನುಭವಿಗೆ ರೂ.10/- ಚದರ ಮೀಟರ್ ರಂತೆ ಗರಿಷ್ಠ 5000 ಚದರ ಮೀಟರ್ ವರೆಗೆ ರೂ.0.50 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |
| | d) | ತರಕಾರಿ ಬೆಳೆಯಲ್ಲಿ ಪ್ಲಾಸ್ಟಿಕ್ ಹೊದಿಕೆ. | ಪ್ಲಾಸ್ಟಿಕ್ ಹೊದಿಕೆಗೆ ಸಹಾಯಧನವನ್ನು ಗರಿಷ್ಠ ರೂ.0.16 ಲಕ್ಷಗಳು/ಹೆಕ್ಟೇರ್ ನಂತೆ, ಪ್ರತಿ ರೈತರಿಗೆ ಗರಿಷ್ಠ 2 ಹೆಕ್ಟೇರ್ ಪ್ರದೇಶಕ್ಕೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |
| x. | ಸಮಗ್ರ ಕೀಟ/ರೋಗ ನಿಯಂತ್ರಣ ಮತ್ತು ಸಮಗ್ರ ಪೋಷಕಾಂಶ ನಿರ್ವಹಣೆ | | ಪ್ರತಿ ಫಲಾನುಭವಿಗೆ ರೂ.1200/ ಹೆಕ್ಟೇರ್ ನಂತೆ ಗರಿಷ್ಠ 4ಹೆ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 30 | 90 |
| xi. | **ಜೇನು ಕೃಷಿ** | | | | |
| | a) | ಜೇನು ಪೆಟ್ಟಿಗೆ ಹಾಗೂ ಕುಟುಂಬ | ಪ್ರತಿ ಜೇನು ಪೆಟ್ಟಿಗೆ ಹಾಗೂ ಕುಟುಂಬದ ಪ್ಯಾಕೇಜ್‌ಗೆ ರೂ.1600/-ರಂತೆ, ಗರಿಷ್ಟ 50 ಕುಟುಂಬ/ಪೆಟ್ಟಿಗೆಗೆ ಸಹಾಯಧನ ನೀಡಲಾಗುತ್ತಿದೆ. | 40 | 90 |

| | | | | | |
|---|---|---|---|---|---|
| | | | (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | | |
| | b) | ಜೇನುತುಪ್ಪ ತೆಗೆಯುವ ಯಂತ್ರ | ಒಂದು ಘಟಕಕ್ಕೆ ರೂ.8000/-ರಂತೆ ಸಹಾಯಧನ ನೀಡಲಾಗುತ್ತಿದೆ. | 40 | 40 |
| xii. | **ತೋಟಗಾರಿಕೆಯಲ್ಲಿ ಯಾಂತ್ರೀಕರಣ** | | | | |
| | a) | ಟ್ರ್ಯಾಕ್ಟರ್ (20ಹೆಚ್.ಪಿ.ವರೆಗೆ) | ಸಾಮಾನ್ಯ ರೈತರಿಗೆ ಗರಿಷ್ಠ ರೂ.0.75 ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿ ಸಣ್ಣ/ಮಹಿಳೆಯರಿಗೆ ಗರಿಷ್ಠ ರೂ.2.70 ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 25 | 90 |
| | b) | ಪವರ್ ಟಿಲ್ಲರ್ (8ಹೆಚ್.ಪಿ.ಗಿಂತ ಕಡಿಮೆ) | ಸಾಮಾನ್ಯ ರೈತರಿಗೆ ಗರಿಷ್ಠ ರೂ.0.40 ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿ ಸಣ್ಣ/ಮಹಿಳೆಯರಿಗೆ ಗರಿಷ್ಠ ರೂ.0.90 ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 40 | 90 |
| | c) | ಪವರ್ ಟಿಲ್ಲರ್ (8ಹೆಚ್.ಪಿ. ಮತ್ತು ಅಧಿಕ) | ಸಾಮಾನ್ಯ ರೈತರಿಗೆ ಗರಿಷ್ಠ ರೂ.0.60 ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿ ಸಣ್ಣ/ಮಹಿಳೆಯರಿಗೆ ಗರಿಷ್ಠ ರೂ.1.35 ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 40 | 90 |

| | | | | | |
|---|---|---|---|---|---|
| | d) | ಸ್ವಯಂ ಚಾಲಿತ ಯಂತ್ರಗಳು | ಸಾಮಾನ್ಯ ರೈತರಿಗೆ ಗರಿಷ್ಠ ರೂ.1.00 ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿ ಸಣ್ಣ / ಮಹಿಳೆಯರಿಗೆ ಗರಿಷ್ಠ ರೂ.2.25 ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 40 | 90 |
| xiv. | **ಮಾನವ ಸಂಪನ್ಮೂಲ ಅಭಿವೃದ್ಧಿ** | | | | |
| | a) | ರೈತರಿಗೆ ತರಬೇತಿ | ರೈತರಿಗೆ ಒಳ ರಾಜ್ಯದಲ್ಲಿ ರೂ.1000/- ಮತ್ತು ಹೊರ ರಾಜ್ಯದಲ್ಲಿ ರೂ.1500/- ಪ್ರತಿ ದಿನಕ್ಕೆ ವೆಚ್ಚ ಭರಿಸಲಾಗುತ್ತಿದೆ. | 100 | 100 |
| xv. | **ಸಮಗ್ರ ಕೊಯ್ಲೋತ್ತರ ನಿರ್ವಹಣೆ** | | | | |
| | a) | ಪ್ಯಾಕ್‌ಹೌಸ್. | ನಿಗದಿತ ವಿನ್ಯಾಸದಲ್ಲಿ ನಿರ್ಮಿಸಿದ ಕನಿಷ್ಠ ಕಡ್ಡಾಯ ಸೌಕರ್ಯಗಳನ್ನು ಹೊಂದಿರುವ 216 ಘ.ಮೀ. ಅಳತೆಯ (9ಮಿ*6ಮಿ*4ಮಿ) ಪ್ಯಾಕ್‌ಹೌಸ್‌ನ ಘಟಕ ವೆಚ್ಚ ರೂ.4.00 ಲಕ್ಷಗಳಾಗಿದ್ದು, ಗರಿಷ್ಟ ರೂ.2.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |
| | b) | ಸಮಗ್ರ ಪ್ಯಾಕ್‌ಹೌಸ್ | ನಿಗದಿತ ವಿನ್ಯಾಸದಲ್ಲಿ ನಿರ್ಮಿಸಿದ ಕನಿಷ್ಠ ಕಡ್ಡಾಯ ಸೌಕರ್ಯಗಳನ್ನು ಹೊಂದಿರುವ 648 ಘ.ಮೀ. ಅಳತೆಯ (9ಮಿ*18ಮಿ*4ಮಿ) ಪ್ಯಾಕ್‌ಹೌಸ್‌ನ ಘಟಕ ವೆಚ್ಚ ರೂ.50.00 | 35 | 35 |

| | | | | | |
|---|---|---|---|---|---|
| | | | ಲಕ್ಷಗಳಾಗಿದ್ದು, ಗರಿಷ್ಟ ರೂ.17.50 ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ. | | |
| | c) | ಶೀತಲ ಗೃಹ ನಿರ್ಮಾಣ | ಪ್ರತಿ ಮೆಟ್ರಿಕ್ ಟನ್‌ಗೆ ರೂ.2800.00 ರಂತೆ ಗರಿಷ್ಠ 5000 ಮೆಟ್ರಿಕ್ ಟನ್‌ವರೆಗೆ ಸಹಾಯಧನ ನೀಡಲಾಗುತ್ತಿದೆ. (Credit Linked Backended Subsidy) | 35 | 35 |
| | d) | ಶೀತಲ ವಾಹನ ಖರೀದಿ | ಪ್ರತಿ ಘಟಕಕ್ಕೆ ಗರಿಷ್ಠ ರೂ.9.10 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. (Credit Linked Backended Subsidy) | 35 | 35 |
| | e) | ಪ್ರಾಥಮಿಕ ಸಂಸ್ಕರಣೆ ಘಟಕಗಳು | ಪ್ರಾಥಮಿಕ ಸಂಸ್ಕರಣೆ ಘಟಕವನ್ನು ಸ್ಥಾಪಿಸಲು ಪ್ರತಿ ಘಟಕ ವೆಚ್ಚ ರೂ 25.00 ಲಕ್ಷಗಳಾಗಿದ್ದು, Credit Linked Backended Subsidy ರೂಪದಲ್ಲಿ ಪ್ರತಿ ಘಟಕಕ್ಕೆ Project cost ಮೊತ್ತಕ್ಕೆ ಮಾರ್ಗಸೂಚಿಯನ್ವಯ ಶೇ. 40 ರಷ್ಟು ಗರಿಷ್ಠ ರೂ. 10.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.<br>(ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 40 | 90 |
| | f) | ಹಣ್ಣು ಮಾಗಿಸುವ ಘಟಕ | ಪ್ರತಿ ಮೆಟ್ರಿಕ್ ಟನ್‌ಗೆ ರೂ.35,000.00 ರಂತೆ ಗರಿಷ್ಠ 300 ಮೆಟ್ರಿಕ್ ಟನ್‌ವರೆಗೆ ಸಹಾಯಧನ ನೀಡಲಾಗುತ್ತಿದೆ. (Credit Linked Backended Subsidy) | 35 | 35 |
| | g) | ಕಡಿಮೆ ವೆಚ್ಚದ ಈರುಳ್ಳಿ ಶೇಖರಣಾ ಘಟಕ (25ಮೆ.ಟನ್) | ಪ್ರತಿ ಘಟಕಕ್ಕೆ ಗರಿಷ್ಠ ರೂ.0.875 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 50 | 90 |

| | | | | | |
|---|---|---|---|---|---|
| | | | (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | | |
| | h) | Cold Staorage Staging | Cold Staorage Staging ಸ್ಥಾಪಿಸಲು ಘಟಕ ವೆಚ್ಚ ರೂ 15.00 ಲಕ್ಷಗಳಾಗಿದ್ದು, Credit Linked Backended Subsidy ರೂಪದಲ್ಲಿ ಪ್ರತಿ ಘಟಕಕ್ಕೆ Project cost ಮೊತ್ತಕ್ಕೆ ಮಾರ್ಗಸೂಚಿಯನ್ವಯ ಶೇ. 35 ರಷ್ಟು ಗರಿಷ್ಠ ರೂ. 5.25 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.<br>(ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 35 | 35 |
| | i) | ಸರ್ಕಾರಿ ಅಥವಾ ಖಾಸಗಿ ಅಥವಾ ಸಹಕಾರಿ ಸಂಘಗಳ ಜಾಗದಲ್ಲಿ ತೋಟಗಾರಿಕಾ ಉತ್ಪಾದನೆಗೆ ಮಾರುಕಟ್ಟೆ ಮೂಲಸೌಕರ್ಯಗಳನ್ನು ಸ್ಥಾಪಿಸುವುದು<br>ಅ) Terminal Markets | ಸರ್ಕಾರಿ ಅಥವಾ ಖಾಸಗಿ ಅಥವಾ ಸಹಕಾರಿ ಸಂಘಗಳ ಜಾಗದಲ್ಲಿ ತೋಟಗಾರಿಕಾ ಉತ್ಪಾದನೆಗೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ Terminal Markets ಸ್ಥಾಪಿಸಲು ಶೇ.25-40 ರಷ್ಟು ಸಹಾಯಧನ ನೀಡಲಾಗುತ್ತಿದೆ. ಘಟಕ ವೆಚ್ಚ ರೂ 150.00 ಕೋಟಿಗಳಾಗಿರುತ್ತದೆ. | 25-40 | |

| | | | | | |
|---|---|---|---|---|---|
| | | ಸರ್ಕಾರಿ ಅಥವಾ ಖಾಸಗಿ ಅಥವಾ ಸಹಕಾರಿ ಸಂಘಗಳ ಜಾಗದಲ್ಲಿ ತೋಟಗಾರಿಕಾ ಉತ್ಪಾದನೆಗೆ ಮಾರುಕಟ್ಟೆ ಮೂಲಸೌಕರ್ಯಗಳನ್ನು ಸ್ಥಾಪಿಸುವುದು<br>ಆ) ಸಗಟು ಮಾರುಕಟ್ಟೆ (Whole sale Market) | ಘಟಕ ವೆಚ್ಚ ರೂ 100.00 ಕೋಟಿಗಳಾಗಿರುತ್ತದೆ. ಸರ್ಕಾರಿ ಅಥವಾ ಖಾಸಗಿ ಅಥವಾ ಸಹಕಾರಿ ಸಂಘಗಳ ಜಾಗದಲ್ಲಿ ತೋಟಗಾರಿಕಾ ಉತ್ಪಾದನೆಗೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಗಟು ಮಾರುಕಟ್ಟೆ ಸ್ಥಾಪಿಸಲು ಬಂಡವಾಳ ವೆಚ್ಚವನ್ನಾಗಿ ಶೇ.25 ರಷ್ಟು ಸಾಮಾನ್ಯ ಪ್ರದೇಶಗಳಿಗೆ ಹಾಗೂ ಶೇ.33.33 ರಷ್ಟು ಬಂಡವಾಳ ವೆಚ್ಚವನ್ನಾಗಿ ನಿಗದಿತ ಮತ್ತು ಗುಡ್ಡಗಾಡು ಪ್ರದೇಶಗಳಿಗೆ ನೀಡಲಾಗುತ್ತಿದೆ. | 25-40 | |
| | j) | Solar Dehydration Unit | ಘಟಕ ವೆಚ್ಚ ಗರಿಷ್ಠ ರೂ.4.00 ಲಕ್ಷಗಳಾಗಿದ್ದು ಶೇ.40 ರಂತೆ ಪ್ರತಿ ಫಲಾನುಭವಿಗೆ ರೂ. 1.60 ಲಕ್ಷ ಸಹಾಯಧನ ನೀಡಲಾಗುತ್ತಿದೆ | 40 | 40 |
| 3 | **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ** | | | | |
| | i | ರೈತ ಉತ್ಪಾದಕರ ಸಂಸ್ಥೆಗಳಿಗೆ (FPO) ಸಹಾಯಧನ | ರಾಜ್ಯ ಸರ್ಕಾರದ ಕಾರ್ಯಕ್ರಮದಡಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಶೇ.90 ರಂತೆ ಪ್ರತಿ ರೈತ ಉತ್ಪಾದಕರ ಸಂಸ್ಥೆಗೆ ಗರಿಷ್ಠ ರೂ.1.00 ಕೋಟಿಗಳ ಸಹಾಯಧನ. ಪ್ರತಿ ರೈತ ಉತ್ಪಾದಕ ಸಂಸ್ಥೆಗೆ ವ್ಯವಹಾರಿಕ ಬಂಡವಾಳವಾಗಿ (ಅವರ್ತನ ನಿಧಿ ರೂಪದಲ್ಲಿ) ರೂ.25.00 ಲಕ್ಷಗಳ ನೆರವು. | - | - |
| | ii | ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ (PPP-IHD) | ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ (PPP-IHD) ಯೋಜನೆಯಡಿ ರೈತರಿಗೆ ಬಿತ್ತನೆ ಹಂತದಿಂದ ಮಾರುಕಟ್ಟೆ ಹಂತದವರೆಗೂ ನೆರವನ್ನು ಒದಗಿಸಲಾಗುತ್ತಿದೆ. ಅಲ್ಲದೇ, ಕೃಷಿ ವಿಜ್ಞಾನ ಕೇಂದ್ರ ಮತ್ತು ರೈತ | - | - |

| | | | | | |
|---|---|---|---|---|---|
| | | | ಉತ್ಪಾದಕ ಸಂಘಗಳ ಸಹಭಾಗಿತ್ವದಲ್ಲಿ ರೈತರಿಗೆ ವಿಸ್ತರಣೆ ಸೇವೆಯನ್ನು ಒದಗಿಸಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | | |
| | iii. | ತೋಟಗಾರಿಕೆಯಲ್ಲಿ ಯಾಂತ್ರೀಕರಣ | ತೋಟಗಾರಿಕೆಯಲ್ಲಿ ಉಪಯೋಗಿಸುವ ವಿವಿಧ ಉಪಕರಣಗಳಿಗೆ ಕೇಂದ್ರ ಸರ್ಕಾರದ SMAM (Sub Mission on Agriculture Mechanization) ಮಾರ್ಗಸೂಚಿಯನ್ವಯ ಸಾಮಾನ್ಯ ವರ್ಗದ ರೈತರಿಗೆ ಶೇ.40 ರಂತೆ ಹಾಗೂ ಪರಿಶಿಷ್ಟ ಜಾತಿ/ಪಂಗಡದ ರೈತರಿಗೆ ಶೇ.90 ರಂತೆ ಸಹಾಯಧನ ನೀಡಲಾಗುತ್ತಿದೆ. | 40 | 90 |
| 4 | ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ | a) ತೆಂಗಿನ ತೋಟಗಳ ಪುನಃಶ್ಚೇತನ ಹಾಗೂ ಮರುನಾಟಿ ಮತ್ತು ನಿರ್ವಹಣೆ | ತೆಂಗಿನ ತೋಟಗಳ ಪುನಃಶ್ಚೇತನ ಹಾಗೂ ಮರುನಾಟಿ ಮತ್ತು ನಿರ್ವಹಣೆಗಾಗಿ ಒಂದು ಹೆಕ್ಟೇರ್ ಪ್ರದೇಶಕ್ಕೆ ತಗಲುವ ಘಟಕ ವೆಚ್ಚ ರೂ.1,10,000/- ಗಳಲ್ಲಿ ಪ್ರತಿ ಫಲಾನುಭವಿಗೆ ಕನಿಷ್ಠ 0.4 ಹೆಕ್ಟೇರ್ ನಿಂದ ಗರಿಷ್ಠ 1 ಹೆಕ್ಟೇರ್ ವರೆಗೆ ಮಿತಿಗೊಳಿಸಿ, ಪ್ರತಿ ಹೆಕ್ಟೇರ್ ಗೆ ರೂ.44,750/- ಗಳನ್ನು ಮೊದಲನೇ ವರ್ಷ ಹಾಗೂ ರೂ.8,750/- ಗಳನ್ನು ಎರಡನೇ ವರ್ಷದ ನಿರ್ವಹಣೆಗೆ ನೀಡಲಾಗುತ್ತಿದೆ. | 100 | 100 |

| | | | | | |
|---|---|---|---|---|---|
| | | b) ಹೊಸ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ | ಹೊಸ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಒಂದು ಹೆಕ್ಟೇರ್ ಪ್ರದೇಶಕ್ಕೆ ತಗಲುವ ಘಟಕ ವೆಚ್ಚ ರೂ.35,000/- ಗಳನ್ನು ಪ್ರತೀ ವರ್ಷಕ್ಕೆ ರೂ,17,500/- ಗಳ ಸಹಾಯಧನವನ್ನು ಎರಡು ವಾರ್ಷಿಕ ಕಂತುಗಳಲ್ಲಿ ನೀಡುವುದು. ಪ್ರತಿ ಫಲಾನುಭವಿಗೆ ಕನಿಷ್ಠ 0.5 ಹೆಕ್ಟೇರ್ ನಿಂದ ಗರಿಷ್ಠ 1 ಹೆಕ್ಟೇರ್ ವರೆಗೆ ಮಿತಿಗೊಳಿಸಿ ಸಹಾಯಧನವನ್ನು ನೀಡಲಾಗುತ್ತಿದೆ. | 100 | 100 |
| 5 | ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ | | | | |
| | a) | ಮಾದರಿ ಸಸ್ಯಾಗಾರ(4ಹೆ)- ಸಾರ್ವಜನಿಕ ವಲಯ | ಶೇ.100 ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.25.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 100 | 100 |
| | b) | ಖಾಸಗಿ ವಲಯ | ಶೇ.50ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.12.50 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ . | 50 | 50 |
| ಸಣ್ಣ ನರ್ಸರಿಗಳಿಗೆ ಸಹಾಯದನ (1 ಹೆಕ್ಟೇರ್) | | | | | |
| | a) | ಸಣ್ಣ ಸಸ್ಯಾಗಾರ (1 ಹೆ)- ಸಾರ್ವಜನಿಕ ವಲಯ | ಶೇ.100 ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.6.25 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 100 | 100 |
| | b) | ಖಾಸಗಿ ವಲಯ | ಶೇ.50ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.3.125 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 50 | 50 |
| | cccc | ಔಷಧಿ ಬೆಳೆಗಳ ಪ್ರದೇಶ ವಿಸ್ತರಣೆ | ಔಷಧಿ ಬೆಳೆಗಳಾದ ಅಶ್ವಗಂಧ, ತುಳಸಿ, ಅಲೋ ವೆರಾ, ಹಿಪ್ಪಲಿ, ಮುಕೂನ, ಕೋಕಂ ವಿಸ್ತರಣೆಗೆ ಶೇ.30 ರಷ್ಟು ಸಹಾಯಧನ ನೀಡಲಾಗುತ್ತಿದೆ. ಪ್ರತಿ ಫಲಾನುಭವಿಗೆ 1 ಅಥವಾ ಅದಕ್ಕಿಂತ ಹೆಚ್ಚು | 30 | 30 |

| | | | | |
|---|---|---|---|---|
| | | ಬೆಳೆಗಳನ್ನು ಒಳಗೊಂಡಂತೆ ಗರಿಷ್ಟ 10 ಎಕರೆವರೆಗೆ ಸಹಾಯಧನ ನೀಡಲಾಗುತ್ತಿದೆ. | | |
| | | ಔಷಧಿ ಬೆಳೆಗಳಾದ ರಕ್ತ ಚಂದನ, ಶ್ರೀಗಂಧ, ಅಗರ್ ವುಡ್ ಬೆಳೆಗಳ ಪ್ರದೇಶ ವಿಸ್ತರಣೆಗೆ ಶೇ.75 ರಷ್ಟು ಸಹಾಯಧನ ನೀಡಲಾಗುತ್ತಿದೆ. ಪ್ರತಿ ಫಲಾನುಭವಿಗೆ 1 ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಒಳಗೊಂಡಂತೆ ಗರಿಷ್ಟ 10 ಹೆಕ್ಕರೆ ವರೆಗೆ ಸಹಾಯಧನ ನೀಡಲಾಗುತ್ತಿದೆ. | 75 | 75 |
| d) | ಒಣಗಿಸುವ ಶೆಡ್/ ಸಂಗ್ರಹಣಾ ಗೋಧಾಮು/ ಮಾರುಕಟ್ಟೆ ಮೂಲಭೂತ ಸೌಲಭ್ಯ ನಿರ್ಮಾಣ | ಯೋಜನಾ ವೆಚ್ಚದ ಶೇ.50 ರಷ್ಟು ಸಹಾಯಧನ | 50 | 50 |
| e) | ಸಾವಯವ ಕೃಷಿ ಮತ್ತು ಗುಂಪು ದೃಢೀಕರಣ | ಶೇ.50 ರಂತೆ ರೂ.10,000 ಪ್ರತೀ ಹೆಕ್ಟೇರ್ ಗೆ 3 ಕಂತುಗಳಲ್ಲಿ ಗರಿಷ್ಟ 4 ಹೆಕ್ಟೇರ್ ಗಳವರೆಗೆ, ಹಾಗೂ ಗುಂಪು ದೃಢೀಕರಣ ರೂ.5.00 ಲಕ್ಷ 50 ಹೆಕ್ಟೇರ್ ಗೆ | – | – |

| | | | | | |
|---|---|---|---|---|---|
| 6 | **ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆತಾಳೆ ಅಭಿಯಾನ ಯೋಜನೆ** | | | | |
| | i | ಸಸಿಗಳಿಗೆ ಸಹಾಯಧನ: ಉತ್ಕೃಷ್ಟ ಗುಣಮಟ್ಟದ ಸಸಿಗಳನ್ನು ರೈತರಿಗೆ ಒದಗಿಸುವುದು | ಪ್ರತಿ ಹೆ. ಗರಿಷ್ಟ 12,000 ಗಳಂತೆ (ಪ್ರತಿ ಸಸಿಗೆ ದೇಶಿ ಮೂಲ ತಳಿಗೆ ರೂ.81.60 ರಂತೆ ಹಾಗೂ ವಿದೇಶಿ ತಳಿಗೆ ರೂ.83.90), ನಾಟಿ ಮಾಡಿದ ಪೂರ್ಣ ವಿಸ್ತೀರ್ಣಕ್ಕೆಸಹಾಯಧನ ನೀಡಲಾಗುತ್ತಿದೆ. | 85 | 85 |
| | ii | ಬೇಸಾಯ ಸಹಾಯಧನ: ಮೊದಲ 3 ವರ್ಷ ಸಸಿಗಳನ್ನು ಪೋಷಿಸಲು ರಾಸಯನಿಕ ಗೊಬ್ಬರ ವನ್ನು ಒದಗಿಸುವುದು. | ರಸಗೊಬ್ಬರದ ರೂಪದಲ್ಲಿ ಸಹಾಯಧನ ನೀಡಲಾಗುತ್ತಿದೆ.<br>ಮೊದಲನೇ ವರ್ಷ-ರೂ.5,000/-<br>ಎರಡನೇ ವರ್ಷ:- ರೂ.5,000/-<br>ಮೂರನೇ ವರ್ಷ:- ರೂ.5,000/-<br>ನಾಲ್ಕನೇ ವರ್ಷ:- ರೂ.5,000/- | 50 | 50 |
| | iii. | ಎತ್ತರವಾದ ತಾಳೆ ಮರಗಳಿಂದ ತಾಳೆ ಹಣ್ಣುಗಳನ್ನು ಕಟಾವು ಮಾಡಲು ಉತ್ತೇಜನ | 20 ಅಡಿಗಿಂತ ಎತ್ತರವಾದ ತಾಳೆ ಮರಗಳಿಂದ ಕಟಾವು ಮಾಡಿದ ಪ್ರತಿ ಟನ್ ಹಣ್ಣಿಗೆ ಶೇ.50 ರ ಸಹಾಯಧನದಂತೆ ಗರಿಷ್ಠ ರೂ.600/- ಸಹಾಯಧನ ನೀಡಲಾಗುತ್ತಿದೆ. | 50 | 50 |
| | iv. | ಇಳುವರಿ ನೀಡುತ್ತಿರುವ ತಾಳೆ ತೋಟಗಳಿಗೆ ರಸಗೊಬ್ಬರ ವಿತರಿಸುವುದು | ಅ) ಕನಿಷ್ಠ 5 ಟನ್/ಹೆ ಇಳುವರಿ ನೀಡುವಂತಹ 5, 6 ಮತ್ತು 7 ನೇ ವರ್ಷದ ತಾಳೆ ತೋಟಗಳಿಗೆ 8000 ಮೊತ್ತದ ರಸಗೊಬ್ಬರವನ್ನು ಕನಿಷ್ಠ 1 ಹೆ ಹಾಗೂ ಗರಿಷ್ಠ 4 ಹೆ ವರೆಗೆ ಸಹಾಯಧನ ನೀಡಲಾಗುತ್ತಿದೆ. | 50 | 50 |

| | | | | | |
|---|---|---|---|---|---|
| | | | ಆ) ಕನಿಷ್ಠ 8 ಟನ್/ಹೆ ಇಳುವರಿ ನೀಡುವಂತಹ 8 ವರ್ಷ ಮೇಲ್ಪಟ್ಟ ತಾಳೆ ತೋಟಗಳಿಗೆ **8000** ಮೊತ್ತದ ರಸಗೊಬ್ಬರವನ್ನು ಕನಿಷ್ಠ 1 ಹೆ ಹಾಗೂ ಗರಿಷ್ಠ 4 ಹೆ ವರೆಗೆ ಸಹಾಯಧನ ನೀಡಲಾಗುತ್ತಿದೆ. | | |
| | v. | ತರಬೇತಿ ಮತ್ತು ಪ್ರಚಾರ | ಒಂದು ದಿನಕ್ಕೆ ರೂ.400/- ರಂತೆ ಗರಿಷ್ಠ ಎರಡು ದಿನಗಳವರೆಗೆ ಒಂದು ತಂಡದಲ್ಲಿ 30 ಜನ ರೈತರಿಗೆ ತರಬೇತಿ ನೀಡಲಾಗುತ್ತಿದೆ. ಒಟ್ಟಾರೆ ಘಟಕ ವೆಚ್ಚ ರೂ.24000/-ಗಳಾಗಿರುತ್ತದೆ. | - | - |
| | vi. | ಕನಿಷ್ಠ ಬೆಂಬಲ ಬೆಲೆ | 2018-19 ನೇ ಸಾಲಿನಲ್ಲಿ ಖಾಸಗಿ ಸಂಸ್ಥೆಗಳು ಪ್ರತಿ ಟನ್ ತಾಳೆ ಹಣ್ಣಿಗೆ ಪಾವತಿಸಿದ ಮೊತ್ತ ಮತ್ತು ಖಚಿತ ಬೆಲೆಯ ವ್ಯತ್ಯಾಸದ ಮೊತ್ತವನ್ನು ರೈತರಿಗೆ ಪ್ರೋತ್ಸಾಹ ಧನದ ರೀತಿಯಲ್ಲಿ ಪಾವತಿಸಲಾಗುವುದು. | - | - |
| **II.** | **ರಾಜ್ಯವಲಯ ಯೋಜನೆಗಳು** | | | | |
| **7** | **ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ** | | | | |
| | i) | ಆಯ್ದ ತೋಟಗಾರಿಕೆ ಬೆಳೆಗಳ ಪ್ರದೇಶ ಅಭಿವೃದ್ಧಿ ಹಾಗೂ ಎರಡನೇ ಮತ್ತು ಮೂರನೇ ವರ್ಷದ ನಿರ್ವಹಣೆ | ಸಣ್ಣ, ಅತೀ ಸಣ್ಣ ಮತ್ತು ಸಾಮಾನ್ಯ ರೈತರಿಗೆ ಶೇ. 50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ರೈತರಿಗೆ ಒಟ್ಟು ಘಟಕದ ಶೇ.90ರಷ್ಟು ಸಹಾಯಧನ ನೀಡಲಾಗುತ್ತಿದೆ. | 50 | 90 |
| | ii) | ನೀರು ಸಂಗ್ರಹಣ ಸ್ಥಾವರ | ಪ್ರತಿ ಘಟಕಕ್ಕೆ ಸಾಮಾನ್ಯ ರೈತರಿಗೆ ಶೇ.50 ರಂತೆ ಗರಿಷ್ಟ ರೂ.75,000/- ಹಾಗೂ ಪರಿಶಿಷ್ಟ ಜಾತಿ/ಪಂಗಡದ ರೈತರಿಗೆ ಶೇ.90 ರಂತೆ ರೂ.1,35,000/- ಸಹಾಯಧನ ನೀಡಲಾಗುತ್ತಿದೆ. | 50 | 90 |

| | | | | | |
|---|---|---|---|---|---|
| | iii) | ಪ್ಯಾಕ್ ಹೌಸ್ ಘಟಕಕ್ಕೆ ಸಹಾಯಧನ | ಪ್ಯಾಕ್ ಹೌಸ್ ಘಟಕ ಸ್ಥಾಪಿಸಲು ಗರಿಷ್ಠ ಘಟಕ ವೆಚ್ಚ ರೂ.4.00 ಲಕ್ಷಗಳಾಗಿದ್ದು. ಸಾಮಾನ್ಯ ವರ್ಗದ ರೈತರಿಗೆ ಶೇ.50 ರಂತೆ ರೂ.2.00 ಲಕ್ಷ ಸಹಾಯಧನ ಹಾಗೂ ಪರಿಶಿಷ್ಟ ಜಾತಿ/ಪಂಗಡಗಳ ರೈತರಿಗೆ ಶೇ.90 ರಂತೆ ರೂ.3.60 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 50 | 90 |
| | iv) | ಪ್ಲಾಸ್ಟಿಕ್ ಕ್ರೇಟ್ಸ್ | ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಆಯ್ಕೆಯಾದ ಎಲ್ಲಾ ವರ್ಗದ ಫಲಾನುಭವಿಗಳಿಗೆ ಪ್ಲಾಸ್ಟಿಕ್ ಕ್ರೇಟ್ (15 ರಿಂದ 20 ಕೆ.ಜಿ ಸಾಮರ್ಥ್ಯವುಳ್ಳ) ಖರೀದಿಗಾಗಿ ಶೇ.50 ರಂತೆ ಗರಿಷ್ಠ ರೂ.150.00 ಪ್ರತಿ ಕ್ರೇಟ್ಸ್ ಗೆ ಸಹಾಯಧನ ನೀಡಲಾಗುತ್ತಿದೆ. | 50 | 50 |
| | v) | ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ | ಕೇಂದ್ರ ಸರ್ಕಾರದ ಯೋಜನೆಗಳಾದ NHM/NHB/ CDB ವತಿಯಿಂದ ಶೇ. 40 ರಷ್ಟು ಸಹಾಯಧನ ಪಡೆದ ಪ್ರಾಥಮಿಕ ಸಂಸ್ಕರಣ ಘಟಕಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯಧನ ಸೇರಿ ಶೇ. 50ರಷ್ಟು ಮೀರದಂತೆ ಗರಿಷ್ಠ ರೂ. 10.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತಿದೆ. | 50 | - |
| | vi | ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿಗೆ ಉತ್ತೇಜನ | ಪ್ರತಿ ಘಟಕಕ್ಕೆ ಗರಿಷ್ಠ ರೂ.0.75 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತಿದೆ. | 100 | 100 |
| | vii) | ರೈತ ಉತ್ಪಾದಕರ ಸಂಸ್ಥೆಗಳಿಗೆ (FPO) ಸಹಾಯಧನ | ರಾಜ್ಯ ಸರ್ಕಾರದ ಕಾರ್ಯಕ್ರಮದಡಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಶೇ.90 ರಂತೆ ಪ್ರತಿ ರೈತ ಉತ್ಪಾದಕರ ಸಂಸ್ಥೆಗೆ ಗರಿಷ್ಠ ರೂ.1.00 ಕೋಟಿಗಳ ಸಹಾಯಧನ. ಪ್ರತಿ ರೈತ ಉತ್ಪಾದಕ | - | - |

| | | | | | |
|---|---|---|---|---|---|
| | | | ಸಂಸ್ಥೆಗೆ ವ್ಯವಹಾರಿಕ ಬಂಡವಾಳವಾಗಿ (ಅವರ್ತನ ನಿಧಿ ರೂಪದಲ್ಲಿ) ರೂ.25.00 ಲಕ್ಷಗಳ ನೆರವು. | | |
| | viii) | ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ (PPP-IHD) | ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ (PPP-IHD) ಯೋಜನೆಯಡಿ ರೈತರಿಗೆ ಬಿತ್ತನೆ ಹಂತದಿಂದ ಮಾರುಕಟ್ಟೆ ಹಂತದವರೆಗೂ ನೆರವನ್ನು ಒದಗಿಸಲಾಗುತ್ತಿದೆ. ಅಲ್ಲದೇ, ಕೃಷಿ ವಿಜ್ಞಾನ ಕೇಂದ್ರ ಮತ್ತು ರೈತ ಉತ್ಪಾದಕ ಸಂಘಗಳ ಸಹಭಾಗಿತ್ವದಲ್ಲಿ ರೈತರಿಗೆ ವಿಸ್ತರಣೆ ಸೇವೆಯನ್ನು ಒದಗಿಸಲಾಗುತ್ತಿದೆ. | - | - |
| | ix) | ಗೇರು ಅಭಿವೃದ್ಧಿ | ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಪ್ರತಿ ಘಟಕಕ್ಕೆ ಒಟ್ಟು ರೂ. 45077/- ರಂತೆ ಹಾಗೂ ಮೊದಲನೆ ಮತ್ತು ಎರಡನೇ ವರ್ಷದ ನಿರ್ವಹಣೆಗೆ ಪ್ರತಿ ವರ್ಷಕ್ಕೆ ರೂ.21908/- ರಂತೆ ನಿಗಧಿಪಡಿಸಲಾಗಿದೆ. | 50 | 90 |
| | x) | ಕಡಿಮೆ ವೆಚ್ಚದ ಅಣಬೆ ಉತ್ಪಾದನಾ ಘಟಕ | ಸಣ್ಣ ಪ್ರಮಾಣದ ಅಣಬೆ ಉತ್ಪಾದನ ಘಟಕದ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಸಹಾಯಧನ (ಕಟ್ಟಡ ಹೊರೆತು ಪಡಿಸಿ) ಘಟಕ ವೆಚ್ಚ : 3.00 ಲಕ್ಷ. ಸಹಾಯಧನದ ಮೊತ್ತ (ಪ್ರತೀ ಘಟಕಕ್ಕೆ ಶೇ.50) ರೂ. 1.50 ಲಕ್ಷ. | 50 | 50 |
| | | | ಹೊಸ ಘಟಕದಲ್ಲಿ ಸಣ್ಣ ಪ್ರಮಾಣದ ಅಣಬೆ ಉತ್ಪಾದನಾ ಘಟಕಕ್ಕೆ ಸಹಾಯಧನ. ಘಟಕ ವೆಚ್ಚ : 10.00 ಲಕ್ಷ. ಸಹಾಯಧನದ ಮೊತ್ತ (ಪ್ರತೀ ಘಟಕಕ್ಕೆ ಶೇ.50) ರೂ. 5.00 ಲಕ್ಷ | 50 | 50 |

| | | | | | |
|---|---|---|---|---|---|
| | xi) | ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ | ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ ಕಾರ್ಯಕ್ರಮದಡಿ ಪ್ರತೀ 4000 ಲೀ ಸಾಮರ್ಥ್ಯದ ಘಟಕಕ್ಕೆ 1.25 ಲಕ್ಷ ರೂಗಳನ್ನು ಹಾಗೂ ಪ್ರತೀ 5000 ಲೀ ಸಾಮರ್ಥ್ಯದ ಘಟಕಕ್ಕೆ 1.40 ಲಕ್ಷ ರೂಗಳನ್ನು, ನಿಗಧಿಪಡಿಸಲಾಗಿದೆ. | 50 | 90 |
| | xi) | ತೋಟಗಾರಿಕೆ ವಿಸ್ತರಣೆ | ಅ) ರಾಜ್ಯದ 11 ತೋಟಗಾರಿಕೆ ತರಬೇತಿ ಕೇಂದ್ರಗಳಲ್ಲಿ 10 ತಿಂಗಳ ವಸತಿ ಸಹಿತ ತರಬೇತಿಯನ್ನು ರೈತರ ಮಕ್ಕಳಿಗೆ ನೀಡಲಾಗುತ್ತದೆ.<br>ಆ) ಗ್ರಾಮೀಣ ಯುವಕ/ಯುವತಿಯರಿಗೆ ಕೌಶಲ್ಯಾಭಿವೃದ್ಧಿ ಪಡಿಸುವ ಸ್ವಯಂ ಉದ್ಯೋಗ/ ತೋಟಗಾರಿಕೆ ಉದ್ದಿಮೆದಾರರ ಅಡಿಯಲ್ಲಿ ಜೀವನೋಪಾಯವನ್ನು ಕಂಡುಕೊಳ್ಳಲು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ. | - | - |
| 8 | ಹೂ ಕೃಷಿಗೆ ಉತ್ತೇಜನ | | | | |
| | i. | ಹಸಿರು ಮನೆಯಲ್ಲಿ ಹಳೆಯ ಮತ್ತು ಅನುತ್ಪಾದಕ ಹೂವಿನ ಗಿಡಗಳನ್ನು ತೆಗೆಯುವುದು ಮತ್ತು ಹೊಸ ಗಿಡಗಳನ್ನು ನೆಡಲು ಸಹಾಯಧನ | ಘಟಕ ವೆಚ್ಚದ ಶೇ.50 ರಂತೆ ಅಥವಾ ಪ್ರತಿ ಚದರ ಮೀಟರ್ ಗೆ ರೂ.50.00 ರಂತೆ ಗರಿಷ್ಠ 1 ಹೆಕ್ಟೇರ್ ವರೆಗೆ (10,000 ಚ.ಮೀ) ಗರಿಷ್ಠ ರೂ.5.00 ಲಕ್ಷಗಳಿಗೆ ಸಹಾಯಧನ ಮೀರದಂತೆ ನೀಡಲಾಗುತ್ತಿದೆ. | 50 | - |
| | ii. | ಹಸಿರು ಮನೆಗಳ polythene sheet ಗಳ ಬದಲಾವಣೆಗೆ ಸಹಾಯಧನ | ಘಟಕ ವೆಚ್ಚದ ಶೇ.50 ರಂಥೆ ಅಥವಾ ಪ್ರತಿ ಚದರ ಮೀಟರ್ ಗೆ ರೂ.30.00 ರಂತೆ ಗರಿಷ್ಠ 1 ಹೆಕ್ಟೇರ್ ವರೆಗೆ (10,000 ಚ.ಮೀ) ಗರಿಷ್ಠ ರೂ.3.00 ಲಕ್ಷಗಳಿಗೆ ಸಹಾಯಧನ ಮೀರದಂತೆ ನೀಡಲಾಗುತ್ತಿದೆ. | 50 | - |

| | | | | | |
|---|---|---|---|---|---|
| 9 | **ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ** | | ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಿದ ರೈತರಿಗೆ ಪ್ರತಿ ಹೆಕ್ಟೇರಿಗೆ ತಗಲುವ ಒಟ್ಟಾರೆ ವೆಚ್ಚದ ಶೇ.75 ರಂತೆ ಪ್ರತಿ ಹೆಕ್ಟೇರ್ ಗೆ ರೂ.7500.00 ಗಳ ಸಹಾಯಧನವನ್ನು ಗರಿಷ್ಠ 2 ಹೆಕ್ಟೇರ್ ವರೆಗೆ ನೀಡಲಾಗುತ್ತಿದೆ. | 75 | 90 |
| 10 | **ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ (ರಾಜ್ಯವಲಯ)** | | | | |
| | a) | ತೆಂಗು ಬೆಳೆಗೆ ತಗುಲುವ ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣೆ ಕಾರ್ಯಕ್ರಮ | ತೆಂಗು ಬೆಳೆಗೆ ತಗುಲುವ ಕೀಟ ಮತ್ತು ರೋಗಗಳ ನಿಯಂತ್ರಣಕ್ಕೆ ಕೀಟ ಮತ್ತು ರೋಗಗಳಿಗೆ ಅನುಗುಣವಾಗಿ ಒಟ್ಟು ಘಟಕ ವೆಚ್ಚದ ಶೇ.75 ರಂತೆ ಸಸ್ಯ ಸಂರಕ್ಷಣ ಔಷಧಿಗಳನ್ನು / ಪರಿಕರಗಳನ್ನು ಖರೀದಿಸಿದ ರೈತರಿಗೆ ಪ್ರತಿ ಹೆಕ್ಟೇರ್ ಗೆ ಗರಿಷ್ಠ ರೂ.5,250.00 ರಂತೆ ಗರಿಷ್ಠ 2 ಹೆಕ್ಟೇರ್ ವರೆಗೆ ಮಿತಿಗೊಳಿಸಿ ಸಹಾಯಧನ ನೀಡಲಾಗುತ್ತಿದೆ. | 75 | 75 |
| | b) | ತೆಂಗಿನ ತೋಟಗಳ ಪ್ರದೇಶ ವಿಸ್ತರಣೆ (ತೆಂಗು ಅಭಿವೃದ್ಧಿ ಮಂಡಳಿ ಅನುಷ್ಠಾನಗೊಳಿಸುವ ಪ್ರದೇಶಕ್ಕೆ ಅನುಗುಣವಾಗಿ ರಾಜ್ಯದ ಪಾಲು) | 2019-20 ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಶೇ.50 ರಂತೆ ಸಂಕರಣ ತಳಿಗೆ ರೂ.13500.00 ಮತ್ತು ಗಿಡ್ಡ ತಳಿಗೆ ರೂ.15000.00 ಹಾಗೂ ಎತ್ತರದ ತಳಿಗಳಿಗೆ ರೂ.13000.00 ದಂತೆ ಪ್ರತಿ ಫಲಾನುಭವಿಗೆ ಗರಿಷ್ಟ 4 ಹೆಕ್ಟೇರ್ ಗಳ ವರೆಗೆ ಒಂದೇ ಕಂತಿನಲ್ಲಿ ಸಹಾಯಧನವನ್ನು ನೀಡಲಾಗುತ್ತಿದೆ. | 50 | 50 |
| | c) | ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರ ತೋಟಗಾರಿಕೆ ಕ್ಷೇತ್ರದಲ್ಲಿ TXD/ | 2019-20 ನೇ ಸಾಲಿಗೆ ಸುಮಾರು 75834 ಸಂಖ್ಯೆಯ TXD / DXT ಹೈಬ್ರಿಡ್ ಬೀಜದ ಕಾಯಿಗಳ ಬಿತ್ತನೆಗಾಗಿ ಶೇ.50 ರಂತೆ ರಾಜ್ಯಪಾಲಿನ ಅನುದಾನ ರೂ.11.37 ಲಕ್ಷಗಳನ್ನು ರಾಜ್ಯ | - | - |

| | | | | | |
|---|---|---|---|---|---|
| | | DXT ಹೈಬ್ರಿಡ್ ತೆಂಗಿನ ಸಸಿಗಳ ಉತ್ಪಾದನೆ | ವಲಯದ ತೆಂಗುಬೆಳೆ ಅಭಿವೃದ್ಧಿ ಯೋಜನೆಯಡಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಉಳಿದ ಶೇ.50 ರಷ್ಟು ಅನುದಾನವನ್ನು KSHDA ವತಿಯಿಂದ ವೆಚ್ಚ ಭರಿಸಲು ಕ್ರಮ ವಹಿಸಲಾಗುತ್ತಿದೆ. | | |
| | d) | ನೀರಾ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ | | | |
| | | ಅ) ನೀರಾ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ | ನೀರಾ ಸಂಸ್ಕರಣಾ ಘಟಕ ಸ್ಥಾಪಿಸಲು ಒಟ್ಟು ಘಟಕ ವೆಚ್ಚದ ಶೇ.50 ರಂತೆ ಗರಿಷ್ಠ ರೂ.100.00 ಲಕ್ಷಗಳಿಗೆ ಮೀರದಂತೆ ಸಹಾಯಧನ ನೀಡುವುದು. | 50 | 50 |
| | | ಆ) ನೀರಾ ತಂತ್ರಜ್ಞರಿಗೆ ತರಬೇತಿ | ತೆಂಗು ಉತ್ಪಾದಕರ ಕಂಪನಿ ಅಥವಾ ತೋಟಗಾರಿಕೆ ರೈತ ಉತ್ಪಾದಕರ ಸಂಸ್ಥೆಯ ಸದಸ್ಯರುಗಳಿಗೆ ಹಾಗೂ ಇತರೆ ಆಸಕ್ತ ರೈತರಿಗೆ ತೆಂಗು ಅಭಿವೃದ್ಧಿ ಮಂಡಳಿಯ ಸಹಯೋಗದೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ. | - | - |
| 11 | **ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ** | | | | |
| | a) | ಆಸಕ್ತ ಫಲಾನುಭವಿಗಳಿಗೆ ಜೇನು ಪೆಟ್ಟಿಗೆ, ಜೇನು ಕುಟುಂಬಗಳ ಹಾಗೂ ಸ್ಟ್ಯಾಂಡ್ ಗಳ ಖರೀದಿಗಾಗಿ ಸಹಾಯಧನ | ಪ್ರತಿ ಜೇನು ಪೆಟ್ಟಿಗೆ, ಜೇನು ಕುಟುಂಬಗಳ ಹಾಗೂ ಸ್ಟ್ಯಾಂಡ್ ಗಳ ಖರೀದಿಗಾಗಿ ಶೇ.40 ರಂತೆ ಗರಿಷ್ಟ ರೂ.1,800/-ಗಳಂತೆ (ಗರಿಷ್ಟ 4 ಪೆಟ್ಟಿಗೆ ಹಾಗೂ ಕುಟುಂಬಕ್ಕೆ) ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತರಿಗೆ ಶೇ.90 ರಂತೆ ಗರಿಷ್ಟ ರೂ.4050/ ಗಳಂತೆ ಸಹಾಯಧನ ನೀಡಲಾಗುತ್ತಿದೆ. | 40 | 90 |
| | b) | ಜೇನು ಸಾಕಾಣೆ ಆಸಕ್ತರಿಗೆ ತರಬೇತಿ | ಪ್ರತಿ ಫಲಾನುಭವಿಗೆ 400 ರಂತೆ ಪ್ರತಿ ತಂಡಕ್ಕೆ 30 ಜನರಂತೆ 2 ದಿನಗಳ ಕಾಲ ತರಬೇತಿ ನೀಡಲಾಗುತ್ತಿದೆ. | - | - |

| | | | | | |
|---|---|---|---|---|---|
| | c) | ಮಧುವನ ಜೇನು ಸಾಕಾಣೆ ಆಸಕ್ತರಿಗೆ ಖಾಸಗಿ ಮಧುವನ ಸ್ಥಾಪನೆಗೆ ಸಹಾಯಧನ | ಪ್ರತಿ ಫಲಾನುಭವಿಗೆ ಶೇ.50 ರಂತೆ ರೂ.50000/- ಸಹಾಯಧನ ನೀಡಲಾಗುತ್ತಿದೆ. | 50 | 50 |
| 12 | **ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ (ಸುಜಲಾ-III)** | | | | |
| | **a) ಉತ್ಪಾದಕತೆ ಹೆಚ್ಚಿಸಲು ವಿಸ್ತರಣೆ ಮತ್ತು ಪ್ರಾತ್ಯಕ್ಷತೆ** | | | | |
| | i) | ರೈತರಿಗೆ ತರಬೇತಿ | ಪ್ರತಿ ತರಬೇತಿಗೆ ರೂ.12,500/- ಅನುದಾನ ನಿಗದಿಪಡಿಸಿದ್ದು, 50 ರೈತರಿಗೆ ತಂತ್ರಜ್ಞಾನ ಅಳವಡಿಕೆ ಬಗ್ಗೆ ಒಂದು ದಿನದ ತರಬೇತಿ ನೀಡಲಾಗುತ್ತಿದೆ. | 100 | 100 |
| | ii) | ರೈತರಿಗೆ ಪ್ರವಾಸ | ರೂ.1.00 ಲಕ್ಷ ವೆಚ್ಚದಲ್ಲಿ 3 ದಿವಸಗಳ ಅವಧಿಗೆ 50 ಜನ ರೈತರಿಗೆ ರಾಜ್ಯದ ಜಲಾನಯನ ಪ್ರದೇಶಗಳಿಗೆ ಪ್ರವಾಸ ಕೈಗೊಳ್ಳಲಾಗುತ್ತಿದೆ. | 100 | 100 |
| | iii) | ಕ್ಷೇತ್ರೋತ್ಸವ | ರೈತರ ತೋಟದಲ್ಲಿ ಅಳವಡಿಕೆಯಾದ ತಂತ್ರಜ್ಞಾನದ ಪ್ರಚಾರಕ್ಕಾಗಿ ರೂ.20,000/- ವೆಚ್ಚದಲ್ಲಿ 100 ರೈತರಿಗೆ ಒಂದು ದಿವಸದ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗುತ್ತಿದೆ. | 100 | 100 |
| | **b) ಕೊಯ್ಲೋತ್ತರ ನಿರ್ವಹಣೆ** | | | | |
| | i) | ರೈತ ಉತ್ಪಾದಕ ಸಂಸ್ಥೆಗೆ ನೆರವು (FPO)-5 ಯೋಜನಾ ಜಿಲ್ಲೆಗಳು | ಕೊಯ್ಲೋತ್ತರ ನಿರ್ವಹಣೆ ಮತ್ತು ಮಾರುಕಟ್ಟೆ ಸೌಲಭ್ಯಗಳಾದ<br>1. ಸಮುದಾಯ ಪ್ಯಾಕ್ ಹೌಸ್.<br>2. ಸಂಗ್ರಹಣಾ ಕೇಂದ್ರ. | 100% | - |

| | | | | | |
|---|---|---|---|---|---|
| | | | 3. ರೈತರ ಒಂದು ನಿಲುಗಡೆ ಮಳಿಗೆ.<br>4. ಕೃಷಿ ಯಂತ್ರಧಾರೆ ಕೇಂದ್ರ<br>ಈ ಸೌಲಭ್ಯಗಳನ್ನು ಒದಗಿಸಲು ಪ್ರತಿ ಜಿಲ್ಲಾ ಯೋಜನಾ FPO ಗಳಿಗೆ ಮುಂದುವರೆದ ಕಾರ್ಯಕ್ರಮಕ್ಕೆ ರೂ. 325.00 ಲಕ್ಷ ಸಹಾಯಧನ ಸೌಲಭ್ಯ ನೀಡಲಾಗುತ್ತಿದೆ. | | |
| | ii) | ರೈತ ಉತ್ಪಾದಕ ಸಂಸ್ಥೆಗೆ ನೆರವು (FPO)-5 ಯೋಜನಾ ಜಿಲ್ಲೆಗಳು | ಹಣ್ಣು, ತರಕಾರಿ ಉತ್ಪನ್ನಗಳನ್ನು ಸೌರಶಕ್ತಿ ಬಳಸಿ ಒಣಗಿಸಲು ಪ್ರತಿ ಜಿಲ್ಲಾ ಯೋಜನಾ FPOಗಳಿಗೆ ರೂ. 10.00 ಲಕ್ಷ ಸಹಾಯಧನ ಸೌಲಭ್ಯ ನೀಡಲಾಗುತ್ತಿದೆ. | 100% | 100% |
| | iii) | ದ್ರಾಕ್ಷಿ ಉತ್ಪನ್ನದ ವರ್ಣ ವಿಗಂಡನೆ ಮತ್ತು ಶ್ರೇಣೀಕರಣ (colour sorting and grading) | ಯೋಜನೆಯ ವಿಜಯಪುರ ಜಿಲ್ಲೆ FPOಗೆ ದ್ರಾಕ್ಷಿ ಉತ್ಪನ್ನದ ವರ್ಣ ವಿಗಂಡನೆ ಮತ್ತು ಶ್ರೇಣೀಕರಣ (colour sorting and grading) ಉದ್ದೇಶಕ್ಕಾಗಿ ಒಂದು ಘಟಕಕ್ಕೆ ರೂ.60.00 ಲಕ್ಷ ಸಹಾಯಧನ ನೀಡಲಾಗುತ್ತಿದೆ. | 100% | 100% |
| 13 | **ಕೃಷಿಭಾಗ್ಯ ಯೋಜನೆ** | | | | |
| | i | ಪಾಲಿಮನೆ ಘಟಕ | ಪ್ರತಿ ಘಟಕಕ್ಕೆ ಗರಿಷ್ಟ ರೂ.39.83 ಲಕ್ಷಗಳಾಗಿದ್ದು, ಈ ಘಟಕದಲ್ಲಿ ಪಾಲಿ ಮನೆ ನಿರ್ಮಾಣ, ಕೃಷಿಹೊಂಡ ನಿರ್ಮಾಣ, ಡೀಸೆಲ್/ವಿದ್ಯುತ್ ಚಾಲಿತ ಮೋಟಾರ್ ಅಳವಡಿಕೆ ಹಾಗೂ ಅಧಿಕ ಮೌಲ್ಯದ ಬೆಳೆ ಉತ್ಪಾದನೆಗೆ ಸಹಾಯಧನ ನೀಡಲಾಗುತ್ತಿದೆ. | 50 | 90 |
| | ii | ನೆರಳು ಪರದೆ ಘಟಕ | ಪ್ರತಿ ಘಟಕಕ್ಕೆ ಗರಿಷ್ಠ ರೂ.23.36 ಲಕ್ಷಗಳಾಗಿದ್ದು, ನೆರಳು ಪರದೆ ನಿರ್ಮಾಣ, ಹಾಗೂ ಅಧಿಕ ಮೌಲ್ಯದ ಬೆಳೆ ಉತ್ಪಾದನೆಗೆ ಸಹಾಯಧನ ನೀಡಲಾಗುತ್ತಿದೆ. | 50 | 90 |

| | | | | |
|---|---|---|---|---|
| | iii ಕೃಷಿ ಹೊಂಡ ಘಟಕ | ಪ್ರತಿ ಘಟಕಕ್ಕೆ ಗರಿಷ್ಠ ರೂ.1.55 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 50 | 90 |
| 14 | **ಅಪ್ರಧಾನ ಹಣ್ಣುಗಳ ಅಭಿವೃದ್ಧಿ** | ಅಪ್ರಧಾನ ಹಾಗೂ ಅಪರೂಪದ ಹಣ್ಣುಗಳನ್ನು ಬೆಳೆಯಲು ತಗಲುವ ಒಟ್ಟಾರೆ ವೆಚ್ಚದ ಶೇ. 50 ರಷ್ಟನ್ನು ಸಾಮಾನ್ಯ ವರ್ಗದ ರೈತರಿಗೆ ಹಾಗೂ ಶೇ: 90 ರಷ್ಟನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ, ಪ್ರತಿ ಫಲಾನುಭವಿಗೆ ಗರಿಷ್ಠ 5 ಎಕರೆ ಪ್ರದೇಶಕ್ಕೆ ಮೀರದಂತೆ ಸಹಾಯಧನವನ್ನು ವಿತರಿಸುವುದು. | 50 | 90 |
| **III.** | **ಜಿಲ್ಲಾವಲಯ ಯೋಜನೆಗಳು** | | | |
| **15** | **ಹನಿ ನೀರಾವರಿಗಾಗಿ ಕೇಂದ್ರವಲಯ ಯೋಜನೆ** | ಹನಿ ನೀರಾವರಿ ನೀರಾವರಿ ಅಳವಡಿಕೆಗೆ ಗರಿಷ್ಠ 5 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುವುದು. ಮೊದಲು 2 ಹೆಕ್ಟೇರ್ ಪ್ರದೇಶಕ್ಕೆ ಶೇ. 90 ರಷ್ಟು ಸಹಾಯಧನ, ಮತ್ತು ನಂತರದ 3 ಹೆಕ್ಟೇರ್ ಪ್ರದೇಶಕ್ಕೆ ಶೇ. 50 ರಷ್ಟು ಸಹಾಯಧನ ನೀಡಲಾಗುತ್ತಿದೆ. | 90 | 90 |
| **16** | **ಶೀತಲ ಗೃಹಗಳ ಸಹಾಯಧನ ಯೋಜನೆ** | ಶೀತಲ ಗೃಹಗಳು ಬಳಸುವ ಪ್ರತಿ ಯೂನಿಟ್ ವಿದ್ಯುಚ್ಛಕ್ತಿಗೆ ರೂ.1.00ರಂತೆ ಸಹಾಯಧನ ನೀಡಲಾಗುತ್ತಿದೆ. | - | - |

| | | | | |
|---|---|---|---|---|
| 17 | ರೈತರಿಗೆ ಸಹಾಯ | • ಹಣ್ಣಿನ ಮತ್ತು ಇತರೆ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಕಸಿ/ ಸಸಿಗಳನ್ನು ರೈತ ಫಲಾನುಭವಿಗಳಿಗೆ ಗರಿಷ್ಟ ರೂ.1,000.00 ಪ್ರತಿ ಎಕರೆಗೆ ಸಹಾಯಧನ ನೀಡಲಾಗುತ್ತಿದೆ. | 100 | 100 |
| | | • ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ/ರೋಗ ಬಾಧೆಯನ್ನು ನಿವಾರಿಸಲು ಉಪಯೋಗಿಸುವ ಸಸ್ಯ ಸಂರಕ್ಷಣಾ ಔಷಧಿಗಳಿಗೆ ಶೇ.50ರಂತೆ ಸಾಮಾನ್ಯ ವರ್ಗದ ರೈತರಿಗೆ ರೂ.2,000.00 ರಂತೆ, ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇ. 90ರಂತೆ ರೂ.3600.00 ಗರಿಷ್ಠ 1 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. | 50 | 50 |
| 18 | ರೈತರಿಗೆ ತರಬೇತಿ | • ಸುಧಾರಿತ ಬೇಸಾಯ, ಆಧುನಿಕ ತಂತ್ರಜ್ಞಾನದ ಬಗ್ಗೆ ಅರಿವು ಮೂಡಿಸುವುದು, ರೈತರಲ್ಲಿ ಸ್ಪರ್ಧಾತ್ಮಕ ಮನೋಭಾವನೆಯನ್ನು ಪ್ರೋತ್ಸಾಹಿಸಿ ಆತ್ಮ ವಿಶ್ವಾಸ ಹೆಚ್ಚಿಸುವುದು ಮತ್ತು ಆರ್ಥಿಕತೆ ಬಗ್ಗೆ ಸದೃಢ ಗೊಳಿಸುವುದು.<br>• ಹಣ್ಣು / ತರಕಾರಿ ಇತ್ಯಾದಿಗಳನ್ನು ಕಡಿಮೆ ಬೆಲೆಯಲ್ಲಿ ದೊರೆಯುವ ಸಮಯದಲ್ಲಿ ಗೃಹ ಬಳಕೆಗೆ ಬಳಸಿ-ಕೊಳ್ಳಲು ಕಡಿಮೆ ವೆಚ್ಚದ ಶೇಖರಣೆ ಮತ್ತು ಸಂಸ್ಕರಣೆ ತಂತ್ರಜ್ಞಾನವನ್ನು ಬಳಸಿ ಸಂಸ್ಕರಿಸಿದ ಉತ್ಪನ್ನಗಳನ್ನು ತಯಾರಿಸುವ ಸಲುವಾಗಿ ಮಹಿಳೆಯರಿಗೆ ತರಬೇತಿ ನೀಡುವುದು. | 100 | 100 |

| | | | | | |
|---|---|---|---|---|---|
| | | | • ರೈತರಿಗೆ ತರಬೇತಿ ನೀಡಲು ಒಂದು ಅಥವಾ ಎರಡು ದಿನಗಳ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಪ್ರತಿ ರೈತರಿಗೆ ಒಂದು ದಿನದ ಅವಧಿಗೆ ರೂ.400/-ರಂತೆ ವೆಚ್ಚ ಭರಿಸಲಾಗುತ್ತಿದೆ. | | |
| 19 | **ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆತಾಳೆ ಅಭಿಯಾನ ಯೋಜನೆ– ಜಿಲ್ಲಾವಲಯ** | | | | |
| | i | ಡೀಸಲ್ / ಎಲೆಕ್ಟ್ರಿಕಲ್ ಪಂಪ್ ಸೆಟ್ ಕೊಳ್ಳಲು ಸಹಾಯಧನ; ವಿದ್ಯುಚ್ಛಕ್ತಿ ಅಭಾವದ ಪ್ರದೇಶಗಳಲ್ಲಿ ನೀರುಣಿಸಲು | ಶೇ.50 ರಂತೆ ಪ್ರತಿ ಘಟಕಕ್ಕೆ ಗರಿಷ್ಟ ರೂ.15,000/- ಸಹಾಯಧನ ನೀಡಲಾಗುತ್ತಿದೆ. | 50 | 50 |
| | ii | ಕೊಳವೆ ಬಾವಿ | ಪ್ರತಿ ರೈತರಿಗೆ / ಘಟಕಕ್ಕೆ ಶೇ.50 ರಂತೆ ಗರಿಷ್ಟ ರೂ.50,000/- ಸಹಾಯಧನ ನೀಡಲಾಗುತ್ತಿದೆ. | 50 | 50 |
| | iii | ತಾಳೆ ತಾಕಿನಲ್ಲಿ ಅಂತರ ಬೆಳೆಗೆ ಸಹಾಯಧನ; | ಪ್ರತಿ ಹೆಕ್ಟೇರಿಗೆ ಶೇ.50 ರಂತೆ ಗರಿಷ್ಟ ರೂ.5,000/- ಸಹಾಯಧನ ನೀಡಲಾಗುತ್ತಿದೆ. | 50 | 50 |
| | vii | ತಾಳೆಹಣ್ಣು ಸಂರಕ್ಷಣಾ ತಂತಿ ಜಾಲರಿ | ಪ್ರತಿ ಘಟಕಕ್ಕೆ ಶೇ.50 ರಂತೆ ಗರಿಷ್ಟ ರೂ.15,000/- ಸಹಾಯಧನ ನೀಡಲಾಗುತ್ತಿದೆ. | 50 | 50 |
| | ix | ಮೋಟಾರ್ ಚಾಲಿತ ತಾಳೆಹಣ್ಣು ಕಟಾವು ಉಪಕರಣ | ಪ್ರತಿ ಘಟಕಕ್ಕೆ ಶೇ.50 ರಂತೆ ಗರಿಷ್ಟ ರೂ.3,000/- ಸಹಾಯಧನ ನೀಡಲಾಗುತ್ತಿದೆ. | 50 | 50 |

| | | | | | |
|---|---|---|---|---|---|
| | x. | ತರಬೇತಿ ಮತ್ತು ಪ್ರಚಾರ | ಒಂದು ದಿನಕ್ಕೆ ರೂ.400/- ರಂತೆ ಗರಿಷ್ಠ ಎರಡು ದಿನಗಳವರೆಗೆ ಒಂದು ತಂಡದಲ್ಲಿ 30 ಜನ ರೈತರಿಗೆ ತರಬೇತಿ ನೀಡಲಾಗುತ್ತಿದೆ. ಒಟ್ಟಾರೆ ಘಟಕ ವೆಚ್ಚ ರೂ.24000/-ಗಳಾಗಿರುತ್ತದೆ. | - | - |
| 20 | **ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆ** | | | | |
| | ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ | | ಜಿಲ್ಲೆಗಳಿಗೆ ನಿಗದಿಪಡಿಸಿದ ಭೌತಿಕ ಗುರಿಗಳಲ್ಲಿ ಸ್ಥಳೀಯ ತೆಂಗಿನ ಸಸಿಗಳ ಉತ್ಪಾದನೆ ಜೊತೆಗೆ ಕನಿಷ್ಟ ಶೇ.25 ರಷ್ಟು ಎಳನೀರು/ಗಿಡ್ಡ ಜಾತಿಯ ತಳಿಗಳ ತೆಂಗಿನ ಕಾಯಿಗಳನ್ನು (ಬೀಜದ) ಬಿತ್ತನೆ ಮಾಡಿ ತೆಂಗಿನ ಸಸಿಗಳನ್ನು ಉತ್ಪಾದಿಸಿ ರೈತರಿಗೆ ಇಲಾಖೆ ನಿಗದಿಪಡಿಸಿದ ದರದಂತೆ ವಿತರಿಸಲಾಗುತ್ತಿದೆ. | - | - |
| 21 | **ಜೇನು ಸಾಕಾಣಿಕೆ (ಜಿಲ್ಲಾವಲಯ)** | | | | |
| | | ಆಸಕ್ತ ಫಲಾನುಭವಿಗಳಿಗೆ ಜೇನು ಪೆಟ್ಟಿಗೆ ಹಾಗೂ ಜೇನು ಕುಟುಂಬಗಳ ಖರೀದಿಗಾಗಿ ಸಹಾಯಧನ | ಪ್ರತಿ ಜೇನು ಪೆಟ್ಟಿಗೆ ಹಾಗೂ ಕುಟುಂಬದ ಪ್ಯಾಕೇಜ್ ಗೆ ಶೇ.40 ರಂತೆ ಗರಿಷ್ಟ ರೂ.1800/- ಗಳಂತೆ (ಗರಿಷ್ಟ 4 ಪೆಟ್ಟಿಗೆ ಹಾಗೂ ಕುಟುಂಬಕ್ಕೆ) ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತರಿಗೆ ಶೇ.90 ರಂತೆ ಗರಿಷ್ಟ ರೂ.4050/ ಗಳಂತೆ ಸಹಾಯಧನ ನೀಡಲಾಗುತ್ತಿದೆ. | 40 | 90 |

| | | | | | |
|---|---|---|---|---|---|
| 22 | **ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ** | | | | |
| | i. | ಹೊಸ ತೆಂಗಿನ ತೋಟಗಳ ನಿರ್ಮಾಣ | ಹೊಸ ತೆಂಗಿನ ತೋಟಗಳ ನಿರ್ಮಾಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಒಟ್ಟು ಅಂದಾಜು ವೆಚ್ಚದ ಶೇ.90 ರಷ್ಟು ಸಹಾಯಧನವನ್ನು ನೀಡಲಾಗುವುದು (ಗರಿಷ್ಠ ಅರ್ಧ ಎಕರೆ ತಾಕು) | - | 90 |
| | ii. | ಪ್ಲಾಸ್ಟಿಕ್ ಕ್ರೇಟ್ಸ್ | ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ರೈತರಿಗೆ ತೋಟಗಾರಿಕೆ ಬೆಳೆಗಳ ಕೊಯ್ಲೋತ್ತರ ನಷ್ಟ ತಪ್ಪಿಸುವ ಸಲುವಾಗಿ ಪ್ಲಾಸ್ಟಿಕ್ ಕ್ರೇಟ್ಸ್ ಗಳನ್ನು ಪ್ರತಿ ಫಲಾನುಭವಿಗೆ ಶೇ. 90 ರಂತೆ ಗರಿಷ್ಟ 25 ಸಂಖ್ಯೆಯಲ್ಲಿ ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿದಂತಹ ಇಲಾಖಾ ದರದಲ್ಲಿ ವಿತರಿಸಲಾಗುತ್ತಿದೆ. | - | 90 |
| | iii. | ಸಣ್ಣ ರೈತರಿಗೆ ತರಕಾರಿ ಬೀಜ ವಿತರಣೆ. | ಘಟಕ ವೆಚ್ಚ ಗರಿಷ್ಟ ರೂ. 2000/- ಗಳಾಗಿದ್ದು ಶೇ.90 ರಂತೆ ಪ್ರತಿ ಫಲಾನುಭವಿಗೆ ರೂ.1800/ಎಕರೆ ಗಳವರೆಗೆ ಸಹಾಯಧನ ನೀಡಲಾಗುತ್ತಿದೆ. | - | 90 |

**ಸೂಚನೆ:** ಸದರಿ ಯೋಜನೆಗಳ ಮಾರ್ಗಸೂಚಿಗಳನ್ವಯ ಷರತ್ತುಗಳು ಅನ್ವಯಿಸುತ್ತವೆ.

**ತೋಟಗಾರಿಕೆ ಜಂಟಿ ನಿರ್ದೇಶಕರು**
**(ಯೋಜನೆ)**

## ಅನುಬಂಧ-2

**ಕಳೆದ 3 ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಡಿ ವೆಚ್ಚ ಮಾಡಿರುವ ಅನುದಾನದ ವಿವರ**

(ರೂ.ಲಕ್ಷಗಳಲ್ಲಿ)

**ಅ) ವರ್ಷ:2016-17**

| ಕ್ರ.ಸಂ | ಯೋಜನೆ | ಸಾಧನೆ |
|---|---|---|
| I | **ಕೇಂದ್ರ ನೆರವಿನ ಯೋಜನೆಗಳು** | |
| 1 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ(ಹನಿ ನೀರಾವರಿ) | 398.17 |
| 2 | ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ. | 44.531 |
| 3 | ರಾಷ್ಟ್ರೀಯ ತೋಟಗಾರಿಕೆ ಮಿಷನ್ | 446.52 |
| 4 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ | 422.33 |
| | **ಉಪ ಮೊತ್ತ** | **1311.551** |
| II | **ರಾಜ್ಯವಲಯ ಯೋಜನೆಗಳು** | |
| 1 | ನಿರ್ದೇಶನ ಮತ್ತು ಆಡಳಿತ | 1.139 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ | 21.4 |
| 3 | ಸಮಗ್ರ ತೋಟಗಾರಿಕಾ ಅಭಿವೃದ್ಧಿ | 612.82 |
| 4 | ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ | 13.98 |
| 5 | ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ | 0.594 |
| 6 | ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ | 14.46 |
| 7 | ತೋಟಗಾರಿಕೆ ಕಟ್ಟಡಗಳು | 5 |
| 8 | ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ -II (ಸುಜಲಾ-III) -ಇಎಪಿ | 5.35 |
| 9 | ತೊಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು | 119.97 |
| 10 | ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ | 13.92 |
| | **ಒಟ್ಟು** | **808.633** |
| **ಅ)** | **ಕೇಂದ್ರವಲಯ+ರಾಜ್ಯವಲಯ** | **2120.184** |

ಕಳೆದ 3 ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಡಿ ವೆಚ್ಚ ಮಾಡಿರುವ ಅನುದಾನದ ವಿವರ

ಅ) ವರ್ಷ:2017-18

| ಕ್ರ.ಸಂ | ಯೋಜನೆ | ಸಾಧನೆ |
|---|---|---|
| I | **ಕೇಂದ್ರ ನೆರವಿನ ಯೋಜನೆಗಳು** | |
| 1 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ) | 664.47 |
| 2 | ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ. | 94.25 |
| 3 | ರಾಷ್ಟ್ರೀಯ ತೋಟಗಾರಿಕೆ ಮಿಷನ್ | 502.03 |
| 4 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ | 43.95 |
| | **ಉಪ ಮೊತ್ತ** | **1304.7** |
| II | **ರಾಜ್ಯವಲಯ ಯೋಜನೆಗಳು** | |
| 1 | ಕೃಷಿ ಭಾಗ್ಯ (ತೋಟಗಾರಿಕೆ) | 206.81 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ | 38.80 |
| 3 | ಸಮಗ್ರ ತೋಟಗಾರಿಕಾ ಅಭಿವೃದ್ಧಿ | 433.92 |
| 4 | ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ | 22.00 |
| 5 | ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ | 5.75 |
| 6 | ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ | 18.00 |
| 7 | ತೋಟಗಾರಿಕೆ ಕಟ್ಟಡಗಳು | 0.00 |
| 8 | S-18 ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ -II (ಸುಜಲಾ-III) -ಇಪಿ | 28.42 |
| 9 | S-20 ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ (2851-00-200-0-01) | 16.67 |
| | **ಒಟ್ಟು** | **770.37** |
| **ಅ)** | **ಕೇಂದ್ರವಲಯ+ರಾಜ್ಯವಲಯ** | **2075.07** |

ಕಳೆದ 3 ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಡಿ ವೆಚ್ಚ ಮಾಡಿರುವ ಅನುದಾನದ ವಿವರ

ಇ) ವರ್ಷ:2018-19

| ಕ್ರ.ಸಂ | ಯೋಜನೆ | ಸಾಧನೆ |
|---|---|---|
| I | **ಕೇಂದ್ರ ನೆರವಿನ ಯೋಜನೆಗಳು** | |
| 1 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ) ) | 589.47 |
| 2 | ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ. | 1755.52 |
| 3 | ರಾಷ್ಟ್ರೀಯ ತೋಟಗಾರಿಕೆ ಮಿಷನ್ | 735.41 |
| 4 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ | 12.04 |
| 5 | SMAM | 199.5 |
| | **ಉಪ ಮೊತ್ತ** | **3291.94** |
| II | **ರಾಜ್ಯವಲಯ ಯೋಜನೆಗಳು** | |
| 1 | ಕೃಷಿ ಭಾಗ್ಯ (ತೋಟಗಾರಿಕೆ) | 155.32 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ | 11.63 |
| 3 | ಸಮಗ್ರ ತೋಟಗಾರಿಕಾ ಅಭಿವೃದ್ಧಿ | 571.43 |
| 4 | ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ | 21.36 |
| 5 | ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ | 0.6 |
| 6 | ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ | 85.5 |
| 7 | S-18 ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ -II (ಸುಜಲಾ-III) -ಇಎಪಿ | 36.19 |
| 8 | ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ | 18.16 |
| 9 | RIDF-XXI.<br>A) Micro Irrigation | 50 |
| | **ಒಟ್ಟು** | **950.19** |
| ಇ) | **ಕೇಂದ್ರವಲಯ+ರಾಜ್ಯವಲಯ** | **4242.13** |
| | **ಒಟ್ಟಾರೆ (ಅ+ಆ+ಇ)** | **8437.384** |

ತೋಟಗಾರಿಕೆ ಜಂಟಿ ನಿರ್ದೇಶಕರು (ಯೋಜನೆ)
ಲಾಲ್ ಬಾಗ್, ಬೆಂಗಳೂರು-4.